ಸರ್ವಿಸ್ ಅಪಾರ್ಟ್‌ಮೆಂಟಿನ ಹತ್ತಿರವೇ ಇದ್ದ ಹೋಟೆಲಿನಲ್ಲಿ ಊಟ ಮುಗಿಸಿ ಬಂದ ಪಲ್ಲವಿ ತನ್ನ ರೂಮಿನ ಕೀಯನ್ನು ಬ್ಯಾಗಿನಲ್ಲಿ ಹುಡುಕಾಡಿದಳು. 'ಕರ್ಮದ್ದು, ಈ ದೊಡ್ಡ ಬ್ಯಾಗಿನ ಯಾವ ಝಿಪ್ಪಿನೊಳಗೆ ಕೀ ಹಾಕಿದ್ನೋ' ತನ್ನನ್ನೇ ಬೈದುಕೊಂಡು ಬ್ಯಾಗನ್ನೆಲ್ಲ ತಡಕಾಡಿದಾಗ ಥಕ್ಕನೆ ಹೊಳಿತು, ಹೊರ ಹೊರಡುವ ಧಾವಂತದಲ್ಲಿ ಹೊರಗಿನ ಪುಟ್ಟ ಝಿಪ್ಪಿಗೆ ಕೀಯನ್ನು ತೂರಿಸಿದ್ದು. ಕೈಗೆ ಸಿಕ್ಕಿದ ಕೀಯಿಂದ ಬಾಗಿಲು ತೆರೆದು ಒಳಬಂದು ಭದ್ರವಾಗಿ ಬಾಗಿಲು ಹಾಕಿ ಎರಡೆರಡು ಬಾರಿ ಲಾಕ್ ಆಗಿದೆಯೋ ಎಂದು ನೋಡಿದಳು. ಬ್ಯಾಗನ್ನು ಮಂಚದ ಬದಿಗೆ ಎಸೆದು ಹಾಸಿಗೆ ಮೇಲೆ ಬಿದ್ದುಕೊಂಡಳು. ಕಣ್ಣು ತುಂಬಿಕೊಂಡು ಬಂದಿದ್ದ ಸಮುದ್ರದ ಅಗಾಧತೆಯೇ ಮನಸಿನ ತುಂಬಾ... ಸಣ್ಣಕ್ಕೆ ಮೊರೆಯಿಡುವಂತೆ ಸದ್ದು ಮಾಡುತ್ತಾ ಆಗಾಗ ಬಂದು ದಡವನ್ನು ತಬ್ಬುವ ಅಲೆಗಳು; ಒಂದು ಅಪ್ಪುಗೆಯ ಉನ್ಮಾದದಿಂದ ಎಚ್ಚರಗೊಳ್ಳುವ ಮುನ್ನವೇ ಇನ್ನೊಂದು ಬಲವಾದ ಅಪ್ಪುಗೆ! ಅಬ್ಬಾ! ಅದೆಷ್ಟು ಮೋಹ ಈ ಅಲೆಗಳಿಗೆ ದಡದ ಮೇಲೆ. ಮತ್ತೆ ಮತ್ತೆ ದಡವನ್ನು ಮೆಲುವಾಗಿ ಚುಂಬಿಸಿ ಹೋಗುವಂತೆ ಹೋಗುತ್ತಿದ್ದವು. ದಡದ ಮೌನ, ಅಲೆಗಳಿಗೆ ಯಾವ ಅಧೀರತೆ ಮೂಡಿಸುತ್ತಲೇ ಇಲ್ಲವಲ್ಲ. ಮನುಷ್ಯ ಮಾತ್ರ ಯಾಕೆ ಅಷ್ಟು ಬೇಗ ಬದುಕಿಂದ ವಿಮುಖನಾಗುತ್ತಾನೋ! ಮಗ್ಗುಲು ಬದಲಾಯಿಸಿದರೆ ಯೋಚನೆ ಶುರುವಿಟ್ಟಿತು... 'ಇದನ್ನೇ ತಾನೇ ನಾನು ಬಯಸಿದ್ದು!... ನಿಜಕ್ಕೂ ಇದನ್ನೇ ಬಯಸಿದ್ದೇನಾ? ಅಥವಾ ಉಸಿರು ಕಟ್ಟುತ್ತಿದ್ದ ಜೀವನದಿಂದ ಓಡಿ ಬಂದ್ನಾ?' ಯೋಚಿಸುತ್ತಾ ಎರಡೂ ಕೈಗಳನ್ನು ಚಾಚಿದಾಗ ದೊಡ್ಡ ಡಬಲ್‌ಕಾಟಿನಲ್ಲಿ ಇನ್ನೂ ಒಬ್ಬರು ಮಲಗಬಹುದಾದಷ್ಟು ಜಾಗ ಉಳಿದಿದೆ ಎನ್ನುವುದು ಅರಿವಿಗೆ ಬಂತು. ಕೈಗಳನ್ನು ಚಾಚಿ ಮಲಗಿದಳು. ವಿಜ್ಜುನ ಮಾತು 'ರಾಕ್ಷಸಿ ಹಾಗೆ ಮಂಚ ಪೂರ್ತಿ ಮಲಗ್ತೀಯಾ' ನೆನಪಾಗಿ ನಗು ಬಂತು. ಹೌದು, ಹೀಗೆ ಕೈಗಳನ್ನು ಮುಕ್ತವಾಗಿ ಚಾಚಿಕೊಂಡು ಮಲಗುವ ಸುಖವೇ ಬೇರೆ! ಕೈಗಳನ್ನು ಮತ್ತಷ್ಟು ಚಾಚಿ ಮಲಗಿದಳು.

ಎಷ್ಟು ಸಮಯವಾಯಿತು ನಾನೂ ವಿಜ್ಜು ಬೇರೆ ಬೇರೆ ಮಲಗಲು ಆರಂಭಿಸಿ? ನಮ್ಮ ದಾಂಪತ್ಯಕ್ಕಿನ್ನೂ ಹನ್ನೆರಡರ ಹರೆಯ. ಮಗಳು ಪವಿತ್ರಳಿಗೆ ಇನ್ನೂ ಒಂಬತ್ತಷ್ಟೇ. ಮಗಳ ಯೋಚನೆಯಿಂದ ಪಲ್ಲವಿಯ ಕಣ್ಣು ಮಂಜಾಯಿತು. ಒಡನೆಯೇ ತನ್ನ ಈ ದೌರ್ಬಲ್ಯದ ಬಗ್ಗೆ ಅಸಾಧ್ಯ ಸಿಟ್ಟು ಬಂತು. ಕಣ್ಣೀರು ಹಾಕಿ ನಾನು ಏನನ್ನು ಸಾಧಿಸಲು ಹೊರಡುತ್ತೇನೋ! ಇತ್ತೀಚೆಗೆ ಈ ದರಿದ್ರ ಕಣ್ಣೀರು ಯೋಚನೆಗೆ ಮೊದಲೇ ಇಳಿಯಲಾರಂಭಿಸುತ್ತದೆ. ವಿಜ್ಜುಗೆ ಕಣ್ಣೀರೆಂದರೆ ಇನ್ನೂ ಅಸಡ್ಡೆ. 'ಓಹ್ ಕಮಾನ್ ಪಲ್ಲವಿ, ಗ್ರೋಅಪ್, ಡೋಂಟ್ ಬಿ ಸೋ ಡ್ರಮಾಟಿಕ್' ನಿರ್ದಾಕ್ಷಿಣ್ಯವಾಗಿ ಹೇಳಿ ಬಿಡುತ್ತಾನೆ. ಕಣ್ಣೀರು ಕೆಳಗಿಳಿದು ಕಿವಿಯಲ್ಲಿ ನಿಂತು ಕಿವಿ ತಂಪಾಗತೊಡಗಿತು. 'ಒಬ್ಬಳೇ ಗೋವಾಕ್ಕೆನೋ ಬಂದೆ. ಎರಡು ದಿನದಿಂದ ದಿನವಿಡೀ ಬಾಡಿಗೆಗೆ ಸಿಕ್ಕ ಟೂ ವೀಲರಿನಲ್ಲಿ ಸುತ್ತಾಡುತ್ತಿದ್ದಿನಿ, ಯಾವ ಬಂಧವಿಲ್ಲ, ಹೊತ್ತು ಗೊತ್ತಿನ ಪರಿವೆಯಿಲ್ಲ. ಸಿಕ್ಕಿದ್ದನ್ನು ತಿಂದುಕೊಂಡು ದಾರಿ ಕಂಡಲ್ಲಿ ಗಾಡಿ ಓಡಿಸಿಕೊಂಡು ಹಿಪ್ಪಿಯಂತೆ ತಿರುಗಾಡುತ್ತಿರುವ ಈ ಸ್ವಾತಂತ್ರ್ಯವನ್ನು ಅದೆಷ್ಟು ದಿನಗಳಿಂದ ಬಯಸಿದ್ದೆ...' ಮತ್ತೆ ಕಣ್ಣುಗಳು ತುಂಬಿದವು.